**ಪಾಠ–3** **ಜುಲೈ 10–16**

# ಅಸಮಾಧಾನದ ಮೂಲ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಮತ್ತಾಯ 10:34–39, ಲೂಕ 12:13–21, ಫಿಲಿ 2:5–8, ಲೂಕ 22:14–30, ಮತ್ತಾಯ 23:1–13.

**ಸ್ಮರಣವಾಕ್ಯ: "ಮತ್ಸರವೂ ಪಕ್ಷಭೇದವೂ ಇರುವ ಕಡೆ ಗಲಿಬಿಲಿಯೂ ಸಕಲ ವಿಧ ನೀಚಕೃತ್ಯಗಳೂ ಇರುವವು"** (ಯಾಕೋಬ 3:16).

ಆಸ್ಪೆನ್ ಮರಗಳು ಸುಂದರವಾಗಿರುತ್ತವೆ, ಅವು 45 ರಿಂದ 90 ಅಡಿಗಳ ಎತ್ತರಕ್ಕೆ ಬೆಳೆಯುತ್ತವೆ. ಅವು ಶೀತದ ಹವೆಯಲ್ಲಿ ಮತ್ತು ತಂಪಾದ ಬೇಸಿಗೆಯಲ್ಲಿ ಚೆನ್ನಾಗಿ ಬೆಳೆಯುತ್ತವೆ. ಅದರ ಕಾಂಡದಿಂದ ಪೀಠೋಪಕರಣಗಳನ್ನು ಬೆಂಕಿ ಕಡ್ಡಿಗಳನ್ನು ತಯಾರಿಸುತ್ತಾರೆ. ಜಿಂಕೆ ಮತ್ತು ಇತರೆ ಪ್ರಾಣಿಗಳ ಕಠಿಣವಾದ ಚಳಿಗಾಲದಲ್ಲಿ ಇದರ ಎಳೆಯ ಕೊಂಬೆಗಳು ಪೌಷ್ಠಿಕ ಆಹಾರವಾಗಿದೆ. ಆಸ್ಪೆನ್ ಮರಗಳಿಗೆ ಹೆಚ್ಚಾದ ಬಿಸಿಲಿರಬೇಕು, ಅವು ಎಲ್ಲಾ ಕಾಲದಲ್ಲಿಯೂ ಬೆಳೆಯುತ್ತವೆ ಮತ್ತು ಚಳಿಗಾಲದಲ್ಲಿಯೂ ಬೆಳೆಯುವುದರಿಂದ ಅನೇಕ ಪ್ರಾಣಿಗಳಿಗೆ ಇದು ಆಹಾರದ ಮೂಲವಾಗುತ್ತದೆ.

ಆಸ್ಪೆನ್ ಮರಗಳ ಬೇರು ವ್ಯವಸ್ಥೆ ಸಸ್ಯವರ್ಗದಲ್ಲೇ ಬಹಳ ದೊಡ್ಡದಾಗಿ ಹರಡುವುದರಿಂದ ಆ ವಿಷಯದಲ್ಲಿ ಅದು ಕುಖ್ಯಾತವಾಗಿದೆ. ಅದರ ಬೇರುಗಳು ಭೂಮಿಯ ಕೆಳಗೆ ಬಹಳ ಬೇಗ ಬೆಳೆದು ಹೆಚ್ಚು ಜಾಗವನ್ನು ವ್ಯಾಪಿಸಿಕೊಳ್ಳುತ್ತದೆ.

* **ಈ ಪಾಠವನ್ನು ಜುಲೈ 17ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.**

ಈ ಮರಗಳು ಸುಮಾರು 150 ವರ್ಷಗಳು ಬದುಕುತ್ತವೆಯಾದರೂ ನೆಲದೊಳಗೆ ಇದರ ಬೇರುಗಳು ಸಾವಿರ ವರುಷಗಳವರೆಗೂ ಬದುಕುಳಿಯುತ್ತವೆ.

ಈ ವಾರದ ಅಧ್ಯಯನದಲ್ಲಿ ನಾವು ನಮ್ಮ ಅಸಮಾಧಾನಕ್ಕೆ ಕಾರಣವಾಗಿರುವ ಕೆಲವು ಮೂಲಗಳು ಯಾವವು ಎಂದು ಕಂಡುಕೊಳ್ಳೋಣ. ಯೇಸುಕ್ರಿಸ್ತನಿಂದ ನಾವು ನಿಜವಾದ ವಿಶ್ರಾಂತಿಯನ್ನು ಹೊಂದಿಕೊಳ್ಳದಂತೆ ಅನೇಕ ವಿಷಯಗಳು ನಮ್ಮನ್ನು ತಡೆಯುತ್ತವೆ. ಅವುಗಳಲ್ಲಿ ಕೆಲವು ನಮಗೆ ತಿಳಿದಿರುವಂಥದ್ದಾಗಿದೆ. ಇನ್ನು ಕೆಲವು ಆಸ್ಪೆನ್ ಮರಗಳ ಬೇರುಗಳಂತೆ ನೆಲದಡಿಯಲ್ಲ್ ಅಡಗಿರುತ್ತವೆ. ನಮ್ಮನ್ನು ನಮ್ಮ ರಕ್ಷಕನಿಂದ ಅಗಲಿಸುವ ನಮ್ಮ ಗುಣ ಸ್ವಭಾವ ನಡತೆಗಳ ವಿಷಯದಲ್ಲಿ ನಾವು ಯಾವಾಗಲೂ ಪ್ರಜ್ಞರಾಗಿರುವುದಿಲ್ಲ.

**ಭಾನುವಾರ** **ಜುಲೈ 11**

## ಯೇಸುಕ್ರಿಸ್ತನು ಭೇದ ಹುಟ್ಟಿಸುತ್ತಾನೆ

ಕೆಲವು ಜನರು ಮಾತ್ರ ಜಗಳವನ್ನು ಇಷ್ಟಪಡುತ್ತಾರೆ. ನಾವು ಶಾಂತಿ ಮತ್ತು ಸಾಮರಸ್ಯಕ್ಕೆ ಹಾತೊರೆಯುತ್ತೇವೆ. ನಾವು ನಮ್ಮ ಸಭೆಯಲ್ಲಿ, ಸಂಸ್ಥೆಗಳಲ್ಲಿ ಸಮಾಧಾನ ಮತ್ತು ವಿರಸಗಳನ್ನು ಪರಿಹರಿಸುವ ವಿಷಯದಲ್ಲಿ ಪ್ರವಚನಗಳನ್ನು ಏರ್ಪಡಿಸುತ್ತೇವೆ. ಮತ್ತಾಯ 10:34–39 ವಚನಗಳನ್ನು ಓದಿರಿ. ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವುದಕ್ಕೆ ಬಂದೆನು ಎಂದು ಯೇಸು ಹೇಳುತ್ತಾನೆ. ಈ ಮಾತಿನ ಅರ್ಥವೇನು? ಯೇಸುಕ್ರಿಸ್ತನು 'ಸಮಾಧಾನದ ಪ್ರಭು' (ಯೆಶಾಯ 9:6) ಎಂಬುದನ್ನು ಪರಿಗಣಿಸಿಕೊಂಡಾಗ ಇದರ ಅರ್ಥವೇನು?

ಮತ್ತಾಯ 10:34–39 ವಚನಗಳಲ್ಲಿ ಯೇಸು ಹೇಳಿದ ಹೇಳಿಕೆಯು ಆಘಾತಕಾರಿಯಾದ ವಿರೋಧ ಭಾವವನ್ನು ಹೊಂದಿದೆ. ನಮ್ಮ ರಕ್ಷಕನಾದ ಯೇಸುಕ್ರಿಸ್ತನು ನೆರೆಹೊರೆಯವರಿಗೆ ವೈರಿಗಳಿಗೆ ಪ್ರೀತಿಯನ್ನು ಉಪದೇಶಿಸುವವ–ನಾಗಿದ್ದನು. ಆತನು ಈ ಲೋಕದಲ್ಲಿ ಮಗುವಾಗಿ ಹುಟ್ಟಿದಾಗ ಆತನ ಸುತ್ತ ಮಹಾರಾಜರುಗಳು, ಮಹಾಸೇನಾಧಿಪತಿಗಳು ಸುತ್ತುವರೆದು ನಿಂತಿರಲಿಲ್ಲ. ಬದಲಾಗಿ ಆತನು ಅಸಹಾಯಕ ಶಿಶುವಾಗಿದ್ದನು, ಈವಾಗ ಆತನು ತನ್ನ ಹಿಂಬಾಲಕರಿಗೆ ಭೇದ ಹುಟ್ಟಿಸುತ್ತೇನೆಂದು ಹೇಳುವವನಾಗಿದ್ದಾನೆ. ಈ ಮಾತಿಗೆ ನಮಗೆ

ಆಶ್ಚರ್ಯವಾಗುವಂತೆ ಆತನ ಶಿಷ್ಯರೂ ಅವನ ಮಾತನ್ನು ಕೇಳುತ್ತಿದ್ದ ಇತರರಿಗೂ ಆಶ್ಚರ್ಯವಾಗಿರಬಹುದು. ಆತನು ಹೀಗೆ ಹೇಳುವುದಕ್ಕೆ ಹೇಗೆ ಸಾಧ್ಯ?

ಮತ್ತಾಯ 10:35–39 ವಚನಗಳು ವಾಸ್ತವವಾಗಿ ಸಂಬಂಧಗಳು ಮತ್ತು ನಿಷ್ಠೆಯ ಬಗ್ಗೆ ಮಾತಾಡುತ್ತವೆ. ಆತನು ಮೀಕ 7:6ನೇ ವಚನವನ್ನು ಎತ್ತಿಕೊಂಡು ತನ್ನ ಜನರಿಗೆ ಶಾಶ್ವತವಾದ ಆಯ್ಕೆಯನ್ನು ಮಾಡಲು ಯೇಸುವು ಸವಾಲು ಹಾಕುತ್ತಾನೆ. ಒಬ್ಬ ಮಗನು ತನ್ನ ತಂದೆ–ತಾಯಿಯರನ್ನು ಪ್ರೀತಿಸಿ ಸನ್ಮಾನಿಸಬೇಕು. ಇದು ಮೋಶೆಯು ದೇವರಿಂದ ಪಡೆದುಕೊಂಡ ಧಾರ್ಮಿಕ ಅಗತ್ಯವಾಗಿರುತ್ತದೆ. ಇದು ದೇವರ ಕಾರ್ಯ ಸಂಹಿತೆಯ ಒಂದು ಭಾಗವಾಗಿದೆ. ಆದಾಗ್ಯೂ ಈ ಪ್ರೀತಿಯು ಯೇಸುಕ್ರಿಸ್ತನನ್ನು ಮೀರುತ್ತಿದ್ದರೆ ಆವಾಗ ಕಠಿಣವಾದ ನಿರ್ಣಯಗಳು ಬೇಕಾಗುತ್ತವೆ. ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಪ್ರೀತಿಸಿ ಸಾಕ ಸಲಹಬೇಕು. ಆದಾಗ್ಯೂ ಆ ಪ್ರೀತಿಯ ಯೇಸುಕ್ರಿಸ್ತನ ಮೇಲೆ ತೋರುವ ಪ್ರೀತಿಗಿಂತ ಹೆಚ್ಚು ಬದ್ಧವಾಗಿದ್ದರೆ ಆಗಲೂ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೊದಲ ವಸ್ತುಗಳಿಗೆ ಮೊದಲ ಆದ್ಯತೆ ಎಂಬುದನ್ನು ಈ ವಚನಗಳಲ್ಲಿ ಯೇಸುಕ್ರಿಸ್ತನು ನಮಗೆ ಜ್ಞಾಪಕ ಪಡಿಸುತ್ತಾನೆ.

‘ನನಗೆ ಯೋಗ್ಯನಲ್ಲ’ವೆಂಬ ಪದವನ್ನು ಉಪಯೋಗಿಸಿಕೊಂಡು ಮೂರು ವಾಕ್ಯಗಳಲ್ಲಿ ಕ್ರಿಸ್ತನು ಈ ಆಯ್ಕೆಯನ್ನು ವ್ಯಕ್ತಪಡಿಸುತ್ತಾನೆ. ಯೋಗ್ಯತೆ ಎಂಬುದು ಶ್ರೇಷ್ಠವಾದ ನೈತಿಕವಾದ ಮಟ್ಟದ ಮೇಲೆ ಅಥವಾ ಪಾಪವನ್ನು ಗೆಲ್ಲುವುದರ ಮೇಲೆ ಆಧಾರಗೊಂಡಿಲ್ಲ ಯೋಗ್ಯತೆ ಎಂಬುದು ಒಬ್ಬನು ಯೇಸುಕ್ರಿಸ್ತನ ಜೊತೆಗೆ ಇಟ್ಟುಕೊಂಡಿರುವ ಸಂಬಂಧದ ಮೇಲೆ ಆಧಾರಗೊಂಡಿದೆ. ನಾವು ಎಲ್ಲಕ್ಕಿಂತಲೂ ಅಂದರೆ ತಂದೆ ತಾಯಿ ಮಕ್ಕಳಿಗಿಂತಲೂ ಯೇಸುಕ್ರಿಸ್ತನನ್ನು ಆಯ್ಕೆ ಮಾಡಿಕೊಂಡಾಗ ಯೋಗ್ಯರಾಗುತ್ತೇವೆ. ನಾವು ಶಿಲುಬೆಯ ಕಷ್ಟ ಸಂಕಟಗಳನ್ನು ಆಯ್ಕೆ ಮಾಡಿಕೊಂಡು ಕ್ರಿಸ್ತನನ್ನು ಹಿಂಬಾಲಿಸುತ್ತೇವೆ.

ನಮ್ಮ ಯುವಕರು ಶಿಲುಬೆಯಿಂದ ತೆಗೆದುಕೊಂಡು ಕ್ರಿಸ್ತನನ್ನು ಹಿಂಬಾಲಿಸುವ ಪರಿಶುದ್ಧವಾದ ಧರ್ಮವನ್ನು ಮನಸ್ಸಿನಲ್ಲಿ ತುಂಬಿಕೊಂಡು ನಡೆಯುವುದನ್ನು ನೋಡುವುದಕ್ಕಿಂತ ಹೆಚ್ಚಿನ ಆಯ್ಕೆಯು ನನಗೆ ಇನ್ನೊಂದಿಲ್ಲ. ಮುಂದೆ ಸಾಗಿರಿ ಕ್ರಿಸ್ತನ ತರುಣ ಶಿಷ್ಯರೇ ನೇಮಗಳಿಂದ ನಿಮ್ಮನ್ನು ನಿಯಂತ್ರಿಸಿಕೊಂಡು ಪರಿಶುದ್ಧತೆ

ಮತ್ತು ನೀತಿಯ ವಸ್ತ್ರಗಳನ್ನು ಧರಿಸಿಕೊಳ್ಳಿರಿ. ನಿಮ್ಮ ರಕ್ಷಕನು ನಿಮ್ಮನ್ನು ನಿಮ್ಮ ಪ್ರತಿಭೆಗೆ ತಕ್ಕಂತೆ ಉಪಯುಕ್ತರಾಗಿರುವಂತೆ ಉತ್ತಮವಾದ ಮಟ್ಟಕ್ಕೆ ನಡೆಸುತ್ತಾನೆ"– ಎಲೆನ್ ಜಿ ವೈಟಮ್ಮನವರ ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, 5ನೇ ಸಂಪುಟ, 87ನೇ ಪುಟ.

ನಾವು ನಮ್ಮ ಶಿಲುಬೆಯನ್ನು ಕೆಲವು ಸಲ ಒತ್ತಾಯ ಪೂರ್ವಕವಾಗಿ ಇಷ್ಟವಿಲ್ಲದೆ ಹೊರುತ್ತೇವೆ ಮತ್ತು ಕೆಲವು ಸಲ ಸ್ವಂತ ಇಚ್ಛೆಯಿಂದ ಹೊರುತ್ತೇವೆ. ಎರಡು ರೀತಿಯಲ್ಲಿ ನಾವು ಶಿಲುಬೆಯನ್ನು ನಂಬಿಗಸ್ತರಾಗಿ ಹೊತ್ತುಕೊಂಡು ಹೋಗುವುದಕ್ಕೆ ಮುಖ್ಯ ಕಾರಣವೇನು?

**ಸೋಮವಾರ** **ಜುಲೈ 12**

## ಸ್ವಾರ್ಥತೆ

ಆಸ್ಪೆನ್ ಮರಗಳು ಭೂಮಿಯ ಕೆಳಗೆ ತಮ್ಮ ಬೇರುಗಳನ್ನು ದೊಡ್ಡದಾಗಿ ಹರಡಿಕೊಳ್ಳುವಂತೆ ಸ್ವಾರ್ಥವು ಸಹಾ ಪಾಪವೆಂಬ ನೆಲದೊಳಗೆ ಹರಡಿದ ದೊಡ್ಡ ಭಾಗವಾಗಿದೆ. ಇದು ನಮ್ಮನ್ನು ಯೇಸುಕ್ರಿಸ್ತನಿಂದ ಸಿಗುವ ನಿಜವಾದ ವಿಶ್ರಾಂತಿಯಿಂದ ದೂರ ಮಾಡುತ್ತದೆ. ನಾವು ವ್ಯಕ್ತಪಡಿಸಬಹುದಾದ ಎಲ್ಲಾ ಪಾಪಗಳಿಗಿಂತ ಸುಲಭವಾಗಿ ವ್ಯಕ್ತಪಡಿಸುವಂಥ ಪಾಪವು ಸ್ವಾರ್ಥವಾಗಿದೆ ಅಲ್ಲವೆ? ನಮ್ಮೆಲ್ಲರಿಗೂ ಸ್ವಾರ್ಥವೆಂಬುದು ಉಸಿರಾಡುವಷ್ಟು ಸ್ವಾಭಾವಿಕವಾಗಿದೆ.

ಲೂಕ 12:13–21 ವಚನಗಳನ್ನು ಓದಿರಿ. ಯೇಸುಕ್ರಿಸ್ತನ ಸಾಮ್ಯದಲ್ಲಿ ಎತ್ತಿ ಹೇಳಿರುವ ಸಮಸ್ಯೆಯ ಬಗ್ಗೆ ಚರ್ಚಿಸಿರಿ. ಮುಂದಿನ ಜೀವನಕ್ಕೆ ಏರ್ಪಾಟು ಮಾಡಿಕೊಳ್ಳುವುದು ಸ್ವಾರ್ಥವೇ ಮತ್ತು ದೇವರ ರಾಜ್ಯವನ್ನು ಅಸಡ್ಡೆ ಮಾಡಿದಂತೆಯೇ? ಹಾಗಿಲ್ಲದಿದ್ದರೆ, ಯೇಸುಕ್ರಿಸ್ತನು ನಮಗೆ ಯಾವುದರ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತಿದ್ದಾನೆ?

ಈ ಸಾಮ್ಯವು ಲೂಕನ ಸುವಾರ್ತೆಯಲ್ಲಿ ಮಾತ್ರ ಬರುತ್ತದೆ. ಜನರ ಮಧ್ಯದಿಂದ ಬಂದ ಅನಾಮಿಕ ಪ್ರಶ್ನೆಗೆ ಉತ್ತರವಾಗಿ ಈ ಸಾಮ್ಯವು ಹೇಳಲ್ಪಟ್ಟಿದೆ. ತಂದೆಯ ಆಸ್ತಿಯನ್ನು ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಯೇಸುಕ್ರಿಸ್ತನು ಅವನ ಮನವಿಯನ್ನು ತಿರಸ್ಕರಿಸುತ್ತಾನೆ. ನಮ್ಮಲ್ಲಿ ಅಂತರ್ಗತವಾಗಿರುವ ಸ್ವಾರ್ಥದ ಸಮಸ್ಯೆಯ ಬಗ್ಗೆ ಗಮನ ಹರಿಸುತ್ತಾನೆ. ಆಳವಾಗಿ ಅಗೆದು ನಮ್ಮೊಳಗೆ ಹಂಚಿಕೊಂಡಿರುವ

ಪಾಪದ ಬೇರಿನ ವ್ಯವಸ್ಥೆಯ ನಮ್ಮ ವೈಯಕ್ತಿಕ ಸ್ವಾರ್ಥ ನಡವಳಿಕೆಗೆ ಕಾರಣವೆಂದು ತೋರಿಸುವವನಾಗಿದ್ದಾನೆ.

ನಿಮ್ಮ ಜೀವನದಲ್ಲಿ ನೀವು ವ್ಯಕ್ತಪಡಿಸಿರುವ ಸ್ವಾರ್ಥಗಳ ಬಗ್ಗೆ ಆಲೋಚಿಸುವ ಸ್ವಾರ್ಥವು ಹೇಗೆ ನಾವು ದೇವರೊಂದಿಗೆ, ನಮ್ಮ ಜೀವನ ಸಂಗಾತಿಯೊಂದಿಗೆ, ನಮ್ಮ ಕುಟುಂಬ ಸದಸ್ಯರೊಂದಿಗೆ ಸಭೆಯ ಕುಟುಂಬಗಳೊಂದಿಗೆ, ನಮ್ಮ ನೆರೆಹೊರೆಯುವರೊಂದಿಗೆ ಮತ್ತು ಸಹೋದ್ಯೋಗಿಗಳೊಂದಿಗೆ ಇಟ್ಟುಕೊಂಡಿರುವ ಸಂಬಂಧದ ಮೇಲೆ ಪರಿಣಾಮ ಬೀರುತ್ತವೆ? ಇದಕ್ಕೆ ಫಿಲಿಪ್ಪಿ 2:5–8ರಲ್ಲಿ ಯಾವ ಪರಿಹಾರ ಸಿಗುತ್ತದೆ?

ಈ ಸಾಮ್ಯದಲ್ಲಿ ಬರುವ ಅನಾಮಿಕ ಶ್ರೀಮಂತನು ತನ್ನ ಆಸೆ ಆಕಾಂಕ್ಷೆಗಳ ಮೇಲೆ ಮಾತ್ರ ಗಮನ ಹರಿಸಿ ತಮಗೆ ಕಾಣಿಸದ ಪರಲೋಕದ ವಾಸ್ತವಿಕತೆಯನ್ನು ಪರಿಗಣಿಸಲು ಮರೆತು ಬಿಡುತ್ತಾನೆ. ದೊಡ್ಡವುಗಳು, ಉತ್ತಮವಾದವುಗಳು ಮತ್ತು ಹೆಚ್ಚಿನದು ದೇವರ ರಾಜ್ಯದ ತಳಹದಿಯ ನಿಯಮಗಳಾಗಿರುವುದಿಲ್ಲ. ಯೇಸುಕ್ರಿಸ್ತನು ನಮ್ಮ ಬದಲಿಯಾಗುವುದಕ್ಕೆ ಆತನಿಗೆ ಪ್ರೇರಿತವಾದುದೇನೆಂದು ಪೌಲನು ನಮಗೆ ಕಿರುನೋಟ ನೀಡುತ್ತಾನೆ.

ಫಿಲಿಪ್ಪಿ 2:5–8 ವಚನಗಳು ನಿಸ್ವಾರ್ಥತೆ, ದೀನತೆ ಮತ್ತು ಪ್ರೀತಿಯನ್ನು ವಿವರಿಸುವ ನೀಲನಕ್ಷೆಯಾಗಿದೆ. ದೇವರ ಮೇಲೆ ಮತ್ತು ಇತರರ ಮೇಲೆ ನಾವು ಇಟ್ಟಿರುವ ಪ್ರೀತಿಯು ನಮ್ಮ ಆಯ್ಕೆ ಆದ್ಯತೆಗಳನ್ನು ಪ್ರೇರಿಸಿದೆ ಹೋದರೆ ನಾವು ಈ ಲೋಕದಲ್ಲಿ ದೊಡ್ಡ ಕಣಜಗಳನ್ನು ಕಟ್ಟಿಸಿಕೊಂಡು ಪರಲೋಕದಲ್ಲಿ ಸಣ್ಣಗಂಟನ್ನು ಇಟ್ಟುಕೊಳ್ಳ ಬಯಸುತ್ತೇವೆ (ಮತ್ತಾಯ 6:20).

ಆಸ್ತಿ ಐಶ್ವರ್ಯದ ಆಸೆಯಲ್ಲಿ ಸಿಕ್ಕಿ ಹಾಕಿಕೊಳ್ಳುವುದು ಬಹಳ ಸುಲಭವಾದುದು ಏಕೆ? ನಾವು ಇಲ್ಲಿ ಬದುಕುಳಿಯುವುದಕ್ಕೆ ಒಂದಷ್ಟು ಹಣ ಬೇಕಾಗುತ್ತದೆಯಾದರೂ ನಾವು ಯಾವಾಗಲೂ ಹೆಚ್ಚಾಗಿ ಬಯಸುತ್ತೇವೆ ಏಕೆ?

**ಮಂಗಳವಾರ** **ಜುಲೈ 13**

## ಆಕಾಂಕ್ಷೆ

ಯೇಸುಕ್ರಿಸ್ತನು ಶಿಲುಬೆಗೆ ಹಾಕುವ ಹಿಂದಿನ ವಾರದಲ್ಲಿ ಆತನು ನಡಿಸಿದ

ಸೇವೆಯನ್ನು ಅಧ್ಯಯನ ಮಾಡುವುದು ಯಾವಾಗಲೂ ಸ್ಫೂರ್ತಿ ಮತ್ತು ಉತ್ತೇಜನದ ಮೂಲವಾಗಿದೆ. ಇದು ಹೇಗೆ ಜನರ ಅಸಮಧಾನ ಮತ್ತು ಆಕಾಕ್ಷೆ ಅಹಿತಕರವಾದ ವಿಷಯಗಳಿಗೆ ನಡೆಸುತ್ತವೆ ಎಂಬುದರ ಸೆರೆ ಹಿಡಿದ ಚಿತ್ರವನ್ನು ತೋರಿಸಿಕೊಡುತ್ತದೆ.

ಲೂಕ 22:14–30 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ಪಸ್ಕದ ಭೋಜನವನ್ನು ಮಾಡುವುದಕ್ಕೆ ಶಿಷ್ಯರೊಟ್ಟಿಗೆ ಸೇರಿದ್ದಾಗ ಅವರು ತಮ್ಮಲ್ಲಿ ಯಾವನು ಹೆಚ್ಚಿನವ–ನೆನಿಸಿಕೊಳ್ಳಬೇಕು ಎಂದು ವಾದ ಮಾಡತೊಡಗಿದಾಗ ಅದನ್ನು ಕೇಳಿಸಿಕೊಂಡ ಯೇಸುಕ್ರಿಸ್ತನ ಭಾವನೆಗಳ ಬಗ್ಗೆ ಆಲೋಚಿಸಿರಿ (ಲೂಕ 22:24). ಯಾಕೆ ಶಿಷ್ಯರು ಅಂತಹ ಗಂಭೀರವಾದ ಸಂದರ್ಭದಲ್ಲಿ ಮಾರ್ಗ ಬಿಟ್ಟು ಮಾನುಷ ಮಹತ್ವಗಳ ಬಗ್ಗೆ ಗಮನಹರಿಸಿದರು?

ನಾವು ಸಾಮಾನ್ಯವಾಗಿ ನಮ್ಮ ಸಭೆಯಲ್ಲಿ, ನಮ್ಮ ಕುಟುಂಬದಲ್ಲಿ ಅಥವಾ ನಾವು ಕೆಲಸ ಮಾಡುವ ಸ್ಥಳಗಳಲ್ಲಿ ನಮ್ಮಲ್ಲಿ ಹೆಚ್ಚಿನವರ್ಯಾರೆಂದು ಚರ್ಚಿಸುವುದಕ್ಕೆ ಹೋಗುವುದಿಲ್ಲ. ನಾವು ಮನಸ್ಸಿನಲ್ಲಿ ಅದರ ಬಗ್ಗೆ ಬಹಳವಾಗಿ ಆಲೋಚಿಸುತ್ತೇವೆಯೇ ಹೊರತು ಮುಕ್ತವಾಗಿ ಅವುಗಳ ಬಗ್ಗೆ ಮಾತಾಡುತ್ತೇವೆಯೇ? ಯೇಸುಕ್ರಿಸ್ತನ ಶಿಷ್ಯರು ಹೀಗೆ ಇದರ ಬಗ್ಗೆ ಎತ್ತಿದ ಪ್ರಶ್ನೆಯು ಮೊದಲನೆಯದಾಗಿರಲಿಲ್ಲ. ಮತ್ತಾಯ 18:1 ವಚನದಲ್ಲಿ ಆತನ ಶಿಷ್ಯರು ಪರಲೋಕದಲ್ಲಿ ಯಾವನು ಹೆಚ್ಚಿನವನು? ಎಂದು ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ. ಯೇಸುಕ್ರಿಸ್ತನ ಉತ್ತರವು ಅವರಿಗೆ ಒಂದು ವಸುನಿಷ್ಠವಾದ ಪಾಠವನ್ನು ತಿಳಿಸುತ್ತದೆ. ಆತನು ಚಿಕ್ಕ ಮಗುವನ್ನು ಹತ್ತಿರಕ್ಕೆ ಕರೆದು ಅವರ ನಡುವೆ ನಿಲ್ಲಿಸಿ ವಿವರಿಸುತ್ತಾನೆ. ನೀವು ತಿರುಗಿಕೊಂಡು ಚಿಕ್ಕಮಕ್ಕಳಂತೆ ಆಗದೆ ಹೋದರೆ ಪರಲೋಕ ರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಎಂದು ಎಚ್ಚರಿಸುತ್ತಾನೆ.

ಯೇಸುಕ್ರಿಸ್ತನಲ್ಲಿ ನಾವು ನಿಜವಾದ ವಿಶ್ರಾಂತಿಯನ್ನು ಕಂಡುಕೊಳ್ಳಬೇಕಾದರೆ ಮಾನಸಾಂತರ ನಮಗೆ ತಳಹದಿಯಾಗಿರಬೇಕು. ನಮಗೆ ಹೊರಗಿನಿಂದ ಸಹಾಯ ಬೇಕೆಂದುಕೊಳ್ಳುತ್ತೇವೆ. ಆದರೆ ತಕ್ಷಣ ಯೇಸುಕ್ರಿಸ್ತನ ಮೇಲೆ ಮಾತ್ರ ನಾವು ಭರವಸವಿಡಬೇಕು ಎಂಬುದನ್ನು ಮನಗಾಣುತ್ತೇವೆ. ನಮ್ಮ ಮೌಲ್ಯಗಳ ಮತ್ತು ಆಶೆಗಳ ವರ್ಗಾವಣೆಯಾಗುವುದು ನಮ್ಮ ಅನುಭವಕ್ಕೆ ಬರುತ್ತದೆ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಈ ಮಗುವಿನಂತೆ ನನ್ನನ್ನು ನಂಬಿರಿ ನನ್ನ ಮೇಲೆ ಭರವಸಪಡಿರಿ

ಎಂದು ಆಜ್ಞಾಪಿಸುತ್ತಾನೆ. ನಿಜವಾದ ಹೆಚ್ಚುಗಾರಿಕೆ (ದೊಡ್ಡತನ) ಎಂಬುದು ನಮ್ಮ ಹಕ್ಕು ಬಾಧ್ಯತೆಗಳನ್ನು ಬಿಟ್ಟು ಪರಲೋಕದ ಮೌಲ್ಯಗಳನ್ನು ಆಲಂಗಿಸಿಕೊಳ್ಳುವುದೇ ಆಗಿದೆ.

ದೌರ್ಭಾಗ್ಯವೇನೆಂದರೆ ಶಿಷ್ಯರು ಈ ಪಾಠವನ್ನು ಯೇಸುಕ್ರಿಸ್ತನು ಪಸ್ಕಭೋಜನ ಮಾಡಿದ ದಿನದವರೆಗೂ ಕಲಿತಿರಲಿಲ್ಲವೆಂಬುದು ಗೊತ್ತಾಗುತ್ತದೆ. ಅವರಲ್ಲಿದ್ದ ವೈಮನಸ್ಸು ಮತ್ತು ಒಳಜಗಳವು ಮತ್ತೆಂದಿಗೂ ನಡೆಯದ ಪರಿಪೂರ್ಣವಾದ ಅನ್ಯೋನ್ಯತೆಯನ್ನು ಹಾಳುಗೆಡಹಿತು. ಇದೆಲ್ಲವನ್ನು ಅವರು ಕ್ರಿಸ್ತನ ಜೊತೆ ಇರುತ್ತಾ ಅವನ ಜೊತೆ ಸೇವೆ ಮಾಡುತ್ತಾ ಆತನ ಉಪದೇಶ ಕೇಳುತ್ತಾ ಕಲಿಯುತ್ತಾ ಇರುವಾಗಲೇ ಮಾಡಿದರು ಅಲ್ಲವೇ? ಮನುಷ್ಯನ ಹೃದಯವು ಶಿಷ್ಯರ ನಡುವೆ ನಡೆದ ಚರ್ಚೆಯು ದುಃಖಕರವಾಗಿದ್ದಾಗ್ಯೂ ನಾವು ಹೆಚ್ಚು ಸಕಾರಾತ್ಮಕವಾದ ಮಗ್ಗುಲಿನಿಂದ ಯೇಸುಕ್ರಿಸ್ತನಲ್ಲಿ ಯಾವಾಗಲೂ ಈವಾಗಲೂ ವಾಸ್ತವಿಕವಾಗಿರುವ ಕೃಪೆಯ ಬಗ್ಗೆ ಆಲೋಚಿಸೋಣ. ಯೇಸುಕ್ರಿಸ್ತನು ತನ್ನ ಶಿಷ್ಯರನ್ನು ಎಂದಿಗೂ ಕೈ ಬಿಡಲಿಲ್ಲ.

ನಾವು ಶಿಲುಬೆಗೆ ತೂಗುಹಾಕಲ್ಪಟ್ಟ ಕ್ರಿಸ್ತನ ಮೇಲೆ ನಮ್ಮ ಗಮನವನ್ನು ಹರಿಸುವುದು ಪಾಪದಲ್ಲಿ ಬಿದ್ದುಹೋದ ಮನುಷ್ಯರಾದ ನಮ್ಮ ಅಹಂಭಾವಕ್ಕೆ ಪರಿಹಾರವಾಗಿದೆ ಏಕೆ?

**ಬುಧವಾರ** **ಜುಲೈ 14**

## ಕಪಟತೆ (ಡಂಬಾಚಾರ)

ಒಬ್ಬ ಕಪಟಿಯು ತನ್ನಲ್ಲಿರುವ ಸ್ವಭಾವವನ್ನು ಮರೆಮಾಚಿ ತನ್ನಲ್ಲಿರದ ಸ್ವಭಾವವನ್ನು ಪ್ರದರ್ಶನ ಮಾಡುವವನಾಗಿರುತ್ತಾನೆ. ಈ ಪದವು ಮತ್ತಾಯ 23ನೇ ಅಧ್ಯಾಯದಲ್ಲಿ, ಯೇಸುಕ್ರಿಸ್ತನು ಸಾರ್ವಜನಿಕವಾಗಿ ಯೆಹೂದ ಮತದ ನಾಯಕತ್ವದ ಪ್ರಧಾನರಾದ ಫರಿಸಾಯರನ್ನು ಶಾಸ್ತ್ರಿಗಳನ್ನು ಕುರಿತು ಮಾಡಿದ ಉಪದೇಶದಲ್ಲಿ ಆರು ಸಲ ಉಪಯೋಗಿಸಲ್ಪಟ್ಟಿದೆ. (ಮತ್ತಾಯ 23:13, 15, 23, 25, 27,29). ಸುವಾರ್ತೆಯು ಯೇಸುಕ್ರಿಸ್ತನು ಜಾರರಿಗೆ, ಸುಂಕದವರಿಗೆ, ವೇಶ್ಯೆಯರಿಗೆ ಮತ್ತು ಕೊಲೆಗಾರರಿಗೆ ಕೊಟ್ಟ ಕೃಪೆ ಮತ್ತು ಕ್ಷಮಾಪಣೆಯನ್ನು ನಮಗೆ ತೋರಿಸುತ್ತದೆ. ಆದರೆ ಯೇಸುಕ್ರಿಸ್ತನು ಕಪಟಿಗಳ ವಿಷಯದಲ್ಲಿ ಬಹಳ ಕಡಿಮೆ ಸಹನೆಯನ್ನು ವ್ಯಕ್ತಪಡಿಸಿದನು

(ಮತ್ತಾಯದಲ್ಲಿರುವ ಹೆಚ್ಚಿನ ಉಲ್ಲೇಖಗಳನ್ನು ನೋಡಿರಿ (ಮತ್ತಾಯ 6:2,5,16, ಮತ್ತಾಯ 7:5, ಮತ್ತಾಯ 15:7–9, ಮತ್ತಾಯ 22:18).

ಮತ್ತಾಯ 23:1–13 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ಕಪಟಿಗಳಲ್ಲಿ ಕಂಡು ಹೇಳಿದ ನಾಲ್ಕು ಗುಣಸ್ವಭಾವವನ್ನು ಪಟ್ಟಿಮಾಡಿರಿ.

ಯೇಸುಕ್ರಿಸ್ತನು ಫರಿಸಾಯರಿಗೆ ಮತ್ತು ಶಾಸ್ತ್ರಿಗಳಿಗೆ ನಾಲ್ಕು ಗುಣಸ್ವಭಾವಗಳನ್ನು ಆರೋಪಿಸುತ್ತಾನೆ. ಮೊದಲು ಶತಮಾನದಲ್ಲಿ ಯೆಹೂದ್ಯಮತದ ವ್ಯವಸ್ಥೆಯಲ್ಲ್ ಫರಿಸಾಯರು ಧಾರ್ಮಿಕ ಹಕ್ಕುಗಳನ್ನು ಹೊಂದಿದ್ದ ಸಂಪ್ರದಾಯನಿಷ್ಠರಾಗಿದ್ದವರು ಅವರು ಲಿಖಿತ ಧರ್ಮಶಾಸ್ತ್ರದಲ್ಲಿ ಮೌಖಿಕ ಕಟ್ಟುಪಾಡುಗಳಲ್ಲಿ ಮತ್ತು ಧಾರ್ಮಿಕ ಶುದ್ಧಾಚರಣೆಗಳಲ್ಲಿ ಬಹಳ ಆಸಕ್ತರಾಗಿದ್ದವರು. ಯೆಹೂದ್ಯ ಮತದ ದಶಕದ ಮತ್ತೊಂದು ಮಗ್ಗುಲಲ್ಲಿ ಮೇಲ್ವರ್ಗಕ್ಕೆ ಸೇರಿದ, ಬಹುತೇಕರು ಶ್ರೀಮಂತರಾಗಿದ್ದ ಸದ್ದುಕಾಯರಿದ್ದರು. ಇವರು ಗ್ರೀಕ್ ಜೀವನಶೈಲಿಯನ್ನು ರೂಢಿಸಿಕೊಂಡು ಗ್ರೀಕ್ ಭಾಷೆಯಾಡುತ್ತಾ ಗ್ರೀಕ್ ತತ್ವಗಳನ್ನು ಪಾಲಿಸುವವರಾಗಿದ್ದರು. ಅವರಿಗೆ ನ್ಯಾಯತೀರ್ಪು ಮತ್ತು ಮರಣದ ನಂತರ ಸಿಗುವ ನಿತ್ಯಜೀವದ ಬಗ್ಗೆ ನಂಬಿಕೆ ಇರಲಿಲ್ಲ. ಅವರನ್ನು ನಾವು ತೆರೆದ ಮನಸ್ಸಿನ ಧಾರಾಳಿಗಳು ಎಂದು ಬಣ್ಣಿಸಬಹುದು. ಆದರೆ ಈ ಎರಡೂ ಗುಂಪಿನವರೂ ಕಪಟಭಾವದವರಾಗಿದ್ದರು.

ಯೇಸುಕ್ರಿಸ್ತನು ಹೇಳುವಂತೆ ನಾವು ಏನು ಹೇಳುತ್ತೇವೆಯೋ ಅದರಂತೆ ನಡೆದುಕೊಳ್ಳದೆ ಹೋದರೆ, ಮತ್ತೊಬ್ಬರು ಪಾಲಿಸಲು ಕಷ್ಟವಾಗುವ ಹಾಗೆ ಧಾರ್ಮಿಕ ಕಟ್ಟುಪಾಡುಗಳನ್ನು ಮಾಡಿಬಿಟ್ಟು ಆ ಮಾನದಂಡಗಳನ್ನು ನಮಗೆ ಅನ್ವಯ ಮಾಡಿಕೊಳ್ಳದೆ ಹೋದರೆ ನಾವು ಕಪಟಿಗಳಾಗುತ್ತೇವೆ. ನಾವು ಪ್ರದರ್ಶಿಸುವ ಧಾರ್ಮಿಕ ಶ್ರದ್ಧೆಗೆ ಮತ್ತೊಬ್ಬರು ನಮ್ಮನ್ನು ಹೊಗಳಬೇಕೆಂದು ಬಯಸುವಾಗ ಮತ್ತು ಪರಲೋಕದ ತಂದೆಗೆ ಸಲ್ಲಬೇಕಾದ ಮಾನ ಮತ್ತು ಗೌರವವನ್ನು ನಾವು ಬಯಸುವಾಗ ನಾವು ಕಪಟಿಗಳಾಗುತ್ತೇವೆ.

ಯೇಸುಕ್ರಿಸ್ತನು ಅವರಿಗೆ ಉಪಯೋಗಿಸಿದ ಪದಗಳು ಎಷ್ಟೇ ಹರಿತವಾಗಿದ್ದರೂ ನೇರವಾಗಿದ್ದರೂ ಆತನು ಯಾರನ್ನು ಕಪಟಗಳೆಂದು ಕರೆದನೋ ಅವರ ಮೇಲೆ ಅತೀವ ಪ್ರೀತಿಯನ್ನು ಕಾಳಜಿಯನ್ನು ಇಟ್ಟಿದ್ದನು.

ಯೆರೂಸಲೇಮಿನ ದೇವಾಲಯದ ಮೇಲೂ ಮತ್ತು ಅವನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಜನರ ಮೇಲೆಯೂ ಯೇಸುಕ್ರಿಸ್ತನು ನಿಧಾನವಾಗಿ ದೃಷ್ಟಿ ಬೀರಿದಾಗ ದೇವಕುಮಾರನಾದ ಆತನ ಮುಖಭಾವದಲ್ಲಿ ದೈವೀಕ ಅನುಕಂಪವು ಮಾಡಿಕೊಂಡಿತ್ತು. ಗದ್ಗತಿವಾದ ಸ್ವರದಿಂದ ಹೃದಯ ದುಃಖತುಂಬಿಕೊಂಡು ಕಣ್ಣುಗಳಿಂದ ಕಂಬನಿ ಸುರಿಸುತ್ತಾ ಹೀಗೆ ಹಲುಬಿದನು. "ಯೆರೂಸಲೇಮೇ, ಯೆರೂಸಲೇಮೇ ಪ್ರವಾದಿಗಳ ಪ್ರಾಣ ತೆಗೆಯುವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದುಕೊಳ್ಳುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವುದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು" – ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 620ನೇ ಪುಟ ಯೇಸುಕ್ರಿಸ್ತನು ಕಪಟಿಗಳೆಂದು ಖಂಡಿಸುತ್ತಿದ್ದ ಮಟ್ಟದಲ್ಲಿ ಧಾರ್ಮಿಕ ನಾಯಕರುಗಳು ಕಪಟಿಗಳಾಗಿರಬಾರದು ಏಕೆ?

ನಮ್ಮಲ್ಲಿ ಅಂತಹ ಕಪಟತನವು ಇರುವುದೇ ಎಂದು ನಾವು ಹೇಗೆ ಅರಿತುಕೊಳ್ಳುತ್ತೇವೆ. ಹಾಗೆ ನಮ್ಮಲ್ಲಿ ಕಪಟತನವಿದ್ದರೆ ಅದನ್ನು ತ್ಯಜಿಸುವುದು ಹೇಗೆ?

**ಗುರುವಾರ** **ಜುಲೈ 15**

## ಅಸಮಧಾನವನ್ನು ಬೇರು ಸಹಿತ ಕೀಳುವುದು

ಯೋಹಾನ 14:1–6 ವಚನಗಳನ್ನು ಓದಿರಿ. ನಾವು ನಮ್ಮ ಹೃದಯವು ಕಳವಳಪಟ್ಟು ಕೊಳ್ಳದೆ ಹಾಗೆ ನಮ್ಮ ಅಸಮಾಧಾನದ ನಡುವೆಯೂ ಏನು ಮಾಡಬಹುದು? ಪಕ್ಷಭೇದ, ಸ್ವಾರ್ಥ, ಆಕಾಂಕ್ಷೆ, ಕಪಟತನ ಇವುಗಳನ್ನು ಗೆಲ್ಲುವುದಕ್ಕೆ ಬೀಗದ ಕೈ ಯಾವುದು ಮತ್ತು ನಿಜವಾದ ವಿಶ್ರಾಂತಿಯನು ಕಂಡುಕೊಳ್ಳುವುದು ಹೇಗೆ?

ಅಸಮಾಧಾನವನ್ನು ಗೆಲ್ಲುವುದು ಯಾವಾಗಲೂ ಯೇಸುಕ್ರಿಸ್ತನಲ್ಲಿ ಆರಂಭವಾಗುತ್ತದೆ. ಆತನೆ ಮಾರ್ಗವೂ ಸತ್ಯವೂ ಜೀವವೂ ಆಗಿದ್ದಾನೆ. ದೂರವಾಣಿ, ಅಂತರ್ಜಾಲ, ದೂರದರ್ಶನ ಮುಂತಾದ ಮಾಧ್ಯಮಗಳಿಂದ ತುಂಬಿದ ಈ ಲೋಕವೆಂಬ ಅಡವಿಯಲ್ಲಿ ನಾವು ಗೊತ್ತು ಗುರಿಯಿಲ್ಲದೆ ಅಲೆಯುವಾಗ ಆತನು

ಸರಿಯಾದ ದಿಕ್ಕಿಗೆ ನಡಿಸುತ್ತಾನೆ; ದೈವೀಕ ನ್ಯಾಯಾಧಿಪತಿಯಾದ ಯೇಸುಕ್ರಿಸ್ತನೇ ಸ್ವತಃ ಸತ್ಯ ಸ್ವರೂಪಿಯಾಗಿರುವುದರಿಂದ ಆತನ ಆತ್ಮನು ಎಲ್ಲಾ ಸತ್ಯಕ್ಕೂ ನಡೆಸುತ್ತಾನೆ (ಯೋಹಾನ 16:13). ನಮಗೆ ನೋವಾದಾಗ, ಆಯಾಸವಾದಾಗ, ಕೃಷರಾಗಿ ಹೋದಾಗ, ಅಸ್ವಸ್ಥರಾದಾಗ, ಖಿನ್ನರಾದಾಗ ಆತನೇ ನಮಗೆ ಜೀವವಾಗಿರುತ್ತಾನೆ. ಖಂಡಿತವಾಗಿಯೂ ಆತನು ನಮಗೆ ಸಮೃದ್ಧಿಯಾದ ಜೀವನವನ್ನು ವಾಗ್ದಾನ ಮಾಡಿದ್ದಾನೆ (ಯೋಹಾನ 10:10). ಇದು ನಮಗೆ ಶಾಶ್ವತ ಮನೆಯನ್ನು ಮತ್ತು ಶಾಶ್ವತವಾದ ಜೀವನವನ್ನು ಒಳಗೊಂಡಿದೆ. ಆದರೆ ಈ ಲೋಕದಲ್ಲಿಯೂ ಸಹಾ ಭಿನ್ನವಾದ ಜೀವನಶೈಲಿಯನ್ನು ಒಳಗೊಂಡಿದೆ. ನಮ್ಮ ಸೃಷ್ಟಿಕರ್ತನು ನಮ್ಮ ಆಳತೆಗೆ ಮೀರದಷ್ಟು ಸಮೃದ್ಧಿಯನ್ನು ಈಗಲೂ ಸಹಾ ಕೊಡುವುದಕ್ಕೆ ಶಕ್ತನಾಗಿದ್ದಾನೆ.

"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ" ಎಂಬುದು ನಾವು ನಿರೀಕ್ಷೆಯಲ್ಲಿ ಜೀವಿಸುವುದಕ್ಕೆ ಒಂದು ಆಹ್ವಾನವಾಗಿದೆ. ನಮ್ಮ ಭಾವನೆ ಕುಗ್ಗಿರುವಾಗ ಆತನು ನಮ್ಮನ್ನು ಮೇಲಕ್ಕೆ ಎತ್ತಬಲ್ಲವನಾಗಿರುತ್ತಾನೆ. ನಾವು ಪಾಪ ಮತ್ತು ಅಂಧಕಾರದಲ್ಲಿ ಹೋರಾಡುವಾಗ ಆತನೇ ನಮ್ಮಲ್ಲಿ ಒಳ್ಳೆಯ ಕೆಲಸಗಳನ್ನು ಆರಂಭಿಸಿ ಅವುಗಳನ್ನು ಸಿದ್ಧಿಗೆ ತರುತ್ತಾನೆ (ಫಿಲಿಪ್ಪಿ 1:6).

ವಿಷಯಗಳು ಇಲ್ಲಿ ಎಷ್ಟೇ ಕೆಟ್ಟದಾಗಿ ಪರಿಣಮಿಸಲಿ (ಹೌದು, ಕೆಟ್ಟದಾಗಿ ಪರಿಣಮಿಸುತ್ತವೆ) ತೊಂದರೆ ಇಲ್ಲ. ನಮಗೆ ಯೇಸುಕ್ರಿಸ್ತನಲ್ಲಿ ಆಗಿರುವ ವಾಗ್ದಾನದ ಕಡೆಗೆ ನೋಡೋಣ. ಆತನು ನಮಗೋಸ್ಕರ ಸ್ಥಳವನ್ನು ಸಿದ್ಧಮಾಡುತ್ತಿದ್ದಾನೆ. ಅಲ್ಲಿ ನಾವು ನಮ್ಮ ನೋವು, ಅಸಮಾಧಾನ, ಕಷ್ಟ ಸಂಕಟಗಳಿಂದ ಎಂದೆಂದಿಗೂ ನಿವೃತ್ತಿ ಹೊಂದಿರುತ್ತೇವೆ. ಈ ನಿರೀಕ್ಷೆಯನ್ನು ತಾನೆ ನಾವು ಯೇಸುಕ್ರಿಸ್ತನಲ್ಲಿ ಹೊಂದಿದ್ದೇವೆ. ನಮ್ಮ ಹಿನ್ನೆಲೆಯೇನೆ ಆಗಿರಲಿ ನಮ್ಮ ಜೀವಿತದಲ್ಲಿ ನಾವು ಅಪ್ರಮಾಣಿಕರಾಗಿದ್ದರೂ ಯೇಸುಕ್ರಿಸ್ತನು ಅದೇ ನಿರೀಕ್ಷೆಯನ್ನು ನಮ್ಮೆಲ್ಲರಿಗೂ ಕೊಟ್ಟಿದ್ದಾನೆ.

ಆದುದರಿಂದ ನಮಗೆ ಮುಖ್ಯವಾದುದ್ದೇನೆಂದರೆ ನಮ್ಮಲ್ಲಿ ಬಲಹೀನ ತೆಗಳಿದ್ದಾಗ್ಯೂ ನಮ್ಮ ಮನಸ್ಸಿಗೆ ನೋವಾಗಿರುವಾಗಲೂ, ಮನಗುಂದಿದಾಗಲೂ ಬಿದ್ದು ಹೋದ ಪರಿಸ್ಥಿತಿಯಲ್ಲೂ ನಮ್ಮನ್ನು ಆತನು ಅಂಗೀಕರಿಸುವುದರಿಂದ ನಾವು

ದೇವರ ಹತ್ತಿರ ಬರಬೇಕು. ಇದನ್ನು ತಾನೆ ಕೃಪೆ ಎನ್ನುವುದು, ಮತ್ತು ಇದು ನಂಬಿಕೆಯಿಂದ ಆಗುವುದರಿಂದ ಇದನ್ನು ನಂಬಬೇಕು.

ಯೆರೆಮೀಯ 3:22ನ್ನು ಓದಿರಿ ಅಲ್ಲಿ ದೇವರು ನಮ್ಮನ್ನು ಏನು ಕೇಳಿಕೊಳ್ಳುತ್ತಾನೆ, ನಂತರ ಪ್ರತಿಯಾಗಿ ನಮಗೆ ಏನು ಮಾಡುತ್ತಾನೆ.

ಯೇಸುಕ್ರಿಸ್ತನು ಹೇಳಿದ ಮಾತಿನ ಬಗ್ಗೆ ಆಲೋಚಿಸಿರಿ "ನಾನು ಹೇಗೆ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಮ್ಮನ್ನು ಕರಕೊಂಡು ಹೋಗಿ ನನ್ನ ಬಳಿ ಸೇರಿಸಿಕೊಳ್ಳುವೆನು" (ಯೋಹಾನ 14:3). ಇದು ಪ್ರಧಾನವಾದ ಮತ್ತು ನಿರ್ಣಾಯಕವಾದ ಯೇಸುಕ್ರಿಸ್ತನ ಎರಡನೆಯ ಬರೋಣದ ವಾಗ್ದಾನದ ಬಗ್ಗೆ ಏನು ಹೇಳುತ್ತದೆ? ವಿಶೇಷವಾಗಿ ಅಡ್ವೆಂಟಿಸ್ಟ್‌ರಿಗೆ (ಸಾವಿನ ಅರಿವು ಇದ್ದವರಾಗಿ) ಎರಡನೆಯ ಬರೋಣದ ವಾಗ್ದಾನವು ಯಾಕೆ ಅಷ್ಟು ಅಮೂಲ್ಯವಾಗಿದೆ.

**ಶುಕ್ರವಾರ** **ಜುಲೈ 16**

**ಹೆಚ್ಚಿನ ಚಿಂತನೆ :** ನಮ್ಮ ಜೀವಿತದ ಮೇಲೆ ನಾವು ಕೇಂದ್ರೀಕೃತರಾದರೆ ಅಲ್ಲಿ ಬೆಳವಣಿಗೆ ಇರುವುದಿಲ್ಲ ಮತ್ತು ಜೀವನದಲ್ಲಿ ಒಳ್ಳೇ ಫಲಗಳನ್ನು ಕೊಡಲಾರೆವು. ನೀವು ಕ್ರಿಸ್ತನನ್ನು ವೈಯಕ್ತಿಕವಾಗಿ ರಕ್ಷಕನನ್ನಾಗಿ ಅಂಗೀಕಾರ ಮಾಡಿದ್ದರೆ, ನಿಮ್ಮನ್ನು ನೀವು ಮರೆತುಕೊಳ್ಳಿರಿ, ಇತರರಿಗೆ ಸಹಾಯ ಮಾಡಲು ಪ್ರಯತ್ನಿಸಿರಿ. ಯೇಸುಕ್ರಿಸ್ತನ ಒಳ್ಳೆಯತನದ ಬಗ್ಗೆ, ಆತನ ಪ್ರೀತಿಯ ಬಗ್ಗೆ ಮಾತಾಡಿರಿ. ನಿಮಗೆ ಸಿಕ್ಕಿರುವ ಕರ್ತವ್ಯವನ್ನು ಚೆನ್ನಾಗಿ ಮಾಡಿರಿ. ಕಳೆದು ಹೋದವವರನ್ನು ಹುಡುಕುವವರಾಗಿ ನಿಮ್ಮೆಲ್ಲಾ ಅವಕಾಶಗಳನ್ನು ಬಲವನ್ನೂ ಉಪಯೋಗಿಸಿ ಆತ್ಮಗಳ ಭಾರವನ್ನು ಹೃದಯದಲ್ಲಿ ಹೊತ್ತುಕೊಂಡು ಸಾಗಿರಿ. ನೀವು ಯೇಸುಕ್ರಿಸ್ತನ ಆತ್ಮವನ್ನು ಹೊಂದಿದಾಗ ನೀವು ನಿಸ್ವಾರ್ಥ ಪ್ರೀತಿಯಿಂದ ಇತರರಿಗಾಗಿ ದುಡಿಯುವಿರಿ. ನೀವು ಬೆಳೆದು ಒಳ್ಳೆಯ ಫಲಗಳನ್ನು ಕೊಡುವಿರಿ. ಆತ್ಮನಿಂದ ದೊರಕುವ ಕೃಪೆಯು ನಿಮ್ಮ ಗುಣಸ್ವಭಾವವನ್ನು ಮಾಗಿಸುವುದು. ನಿಮ್ಮ ನಂಬಿಕೆಯು ವೃದ್ಧಿಯಾಗುತ್ತದೆ. ನಿಮ್ಮ ಅರಿವು ತಿಳಿಯಾಗುತ್ತದೆ. ನಿಮ್ಮ ಪ್ರೀತಿಯು ಪರಿಪೂರ್ಣವಾಗುತ್ತದೆ. ನೀವು ಪರಿಶುದ್ಧತೆಯಲ್ಲಿ, ಉದಾತ್ತತೆಯಲ್ಲಿ ಮತ್ತು ಮನೋಹರತೆಯಲ್ಲಿ ಯೇಸುಕ್ರಿಸ್ತನ ಸ್ವರೂಪವನ್ನು ಹೆಚ್ಚು ಹೆಚ್ಚಾಗಿ ಪ್ರತಿಫಲಿಸುವಿರಿ"– ಎಲೆನ್ ಜಿ ವೈಟಮ್ಮನವರ ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸೆನ್ಸ್ ಪುಸ್ತಕದಲ್ಲಿ ಪುಟ 67, 68.

ದೇವರ ಕೃಪೆಯಲ್ಲಿ ತಗ್ಗಿಸಿಕೊಳ್ಳದೆ ಸಭೆಯಲ್ಲಿ ಸದಸ್ಯರ ನಡುವೆ ಇರುವ ಸಮಸ್ಯೆಗಳನ್ನು ಪರಿಹರಿಸುವಾಗ ಸಂಬಂಧಿತ ಗುಂಪಿನ ನಡುವೆ ಮಾತುಕತೆಯು ಗಂಟೆಗಳ ಕಾಲ ಎಳೆದುಕೊಂಡು ಹೋಗುತ್ತದೆ. ಆವಾಗ ಅವರ ಸಮಯವು ಮಾತ್ರವಲ್ಲ ದೇವರ ಸೇವಕರ ಸಮಯವೂ ಪೋಲಾಗುತ್ತದೆ. ನಾವು ನಮ್ಮ ಗರ್ವ ಮತ್ತು ಸ್ವಾರ್ಥವನ್ನು ಪಕ್ಕಕ್ಕೆ ಸರಿಸಿದರೆ ನಮ್ಮ ಸಮಸ್ಯೆಗಳು ಐದು ನಿಮಿಷಗಳಲ್ಲಿ ಪರಿಹಾರವಾಗುತ್ತವೆ" – ಎಲೆನ್ ಜಿ ವೈಟಮ್ಮನವರ ಈಸಿ ರೈಟಿಂಗ್ಸ್ 119ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಲ್ಲಿ ನಿಜ ಜೀವನದಲ್ಲಿ ಸ್ವಾರ್ಥವನ್ನು ಗೆಲ್ಲುವ ವಿಧಾನಗಳ ಬಗ್ಗೆ ಆಲೋಚಿಸಿರಿ. ಇವು ನಿಜವಾಗಿ ನಮ್ಮ ಜೀವನದಲ್ಲಿ ಸಾಧ್ಯವಾಗುವಂತೆ ಪರಸ್ಪರ ನಾವು ಹೇಗೆ ಜವಾಬ್ದಾರಿ ವಹಿಸಬಹುದು?

2. ಆಕಾಂಕ್ಷೆಯು ಹುಟ್ಟುತ್ತಾ ಕೆಟ್ಟದಲ್ಲ. ಆದರೂ ಅದರ ಬಲೆಯಲ್ಲಿ ಬಿದ್ದು ಹೋಗದೆ ದೇವರಿಂದ ಸಿಗುವ ದೊಡ್ಡ ವಸ್ತುಗಳನ್ನು ಹೇಗೆ ಕಲ್ಪಿಸಿಕೊಳ್ಳುವಿರಿ ಮತ್ತು ಅವುಗಳಿಗಾಗಿ ಕಾಯಬಿಲ್ಲಿರಿ?

3. ನಮ್ಮಲ್ಲಿ ಬಹುತೇಕರು ತಮ್ಮಲ್ಲಿರುವ ಆಸೆ ಆಕಾಂಕ್ಷೆ, ಕಪಟತನ, ಮತ್ಸರ ಮುಂತಾದವುಗಳನ್ನು ಬಹಿರಂಗವಾಗಿ ತೋರಿಸುವುದಿಲ್ಲ. ನಾವು ಅವುಗಳನ್ನು ಬಹಳ ಉಪಾಯದಲ್ಲಿ ಮರೆಸುವ ವೇಷ ತೊಟ್ಟಿರುತ್ತೇವೆ. ಆಸ್ಪಿನ್ ಮರಗಳ ಬೇರುಗಳ ಭೂಮಿಯ ಕೆಳಪದರುಗಳಲ್ಲಿ ಹರಡಿಕೊಂಡಂತೆ ನಮ್ಮಲ್ಲೂ ಈ ನಕಾರಾತ್ಮಕ ಗುಣಸ್ವಭಾವಗಳು ಗುಪ್ತವಾಗಿ ಮನೆ ಮಾಡಿರುತ್ತವೆ. ಆವಾಗ ನಮ್ಮಲ್ಲಿ ಆತ್ಮನಿಂದ ಮಾನಸಾಂತರ ಹೊಂದಿ ಅಭ್ಯಾಸದಲ್ಲಿಟ್ಟುಕೊಂಡಿರುವ ಗುಣಸ್ವಭಾವಗಳು ಹೇಗೆ ಕಾಣುತ್ತವೆ? ನಾವು ನಮ್ಮ ಅಸಮಾಧಾನದ ಬೇರನ್ನು ಕಿತ್ತೊಗೆಯ ಬಹುದು ಮತ್ತು ಯೇಸುಕ್ರಿಸ್ತನಲ್ಲಿ ನಿಜವಾದ ವಿಶ್ರಾಂತಿಯನ್ನು ಹೊಂದಿಕೊಳ್ಳಬಹುದು?

4. ಯೇಸು ಕ್ರಿಸ್ತನ ಎರಡನೆ ಬರೋಣದ ಪ್ರಾಮುಖ್ಯತೆಯ ಬಗ್ಗೆ ಇರುವ ಗುರುವಾರ ಪಾಠದ ಪ್ರಶ್ನೆಯ ಬಗ್ಗೆ ಹೆಚ್ಚಾಗಿ ಧ್ಯಾನಿಸಿರಿ. ಖಂಡಿತವಾಗಿಯೂ,

ಅದಿಲ್ಲದೆ ನಮಗೆ ಯಾವ ನಿರೀಕ್ಷೆ ಇದೆ? ಸತ್ತವರು ಕ್ರಿಸ್ತನು ಎರಡನೇ ಸಲ ಬರುವಾಗ ಪುನರುತ್ಥಾನ ಹೊಂದುತ್ತಾರೆ. ಅದುವರೆಗೆ ನಿದ್ರಿಸುತ್ತಾರೆ ಎಂದು ತಿಳಿದಿರುವಾಗ ಎರಡನೇ ಬರೋಣ ಇಲ್ಲದೆ ಹೋದರೆ ಆತನ ಮೊದಲ ಬರೋಣ ನಮಗೆ ಹೇಗೆ ಪ್ರಯೋಜನವಾಗುತ್ತದೆ?